4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ, ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಪುನಃ ಹರಾಜ್ ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಉಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರ್ತಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕೂಫ್ ಮಾಡಲ್ಪಡತಕ್ಕದ್ದು.

6. ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನು ಡೆಪ್ಯೂಟಿ ಕಮಿಷನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲೀ ಅಂದಾಜಾ ಬೀಜವರಿ ನಿಷಯದಲ್ಲಾಗಲೀ ಇರುವ ಗಲ್ಲತ್ತು ಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ಲುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆಯ ರುಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು / ತಾಲ್ಲೂಕು	ಹೋಬಳಿ	ಗ್ರಾಮ	ಜೋಡೀದಾರರ ಹೆಸರು	ಪೂರಾಗ್ರಾಮದ ಅಂದಾಜಾ ಬೀಜವರಿ.	ಪೂರಾಗ್ರಾಮದ ಅಂದಾಜಾ ಹುಟ್ಟುವಳಿ ಇತ್ಯಾದಿ ಯಾ ಬೇರೀಜು.	ಸಾಲಿಯಾನಾ ಸರ್ಕಾರದ ಕಂದಾಯ ಕೊಡಬೇಕಾದ ಕಿಸ್ತು ಕ್ವಿಟರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು, ಮೈರೆ.
ಶಾನಭೋಗ				ಖಂ. ಕೊ.	ರೂ.	ರೂ. ಆ.	ರೂ. ಆ. ಪೈ.	
ಹೊಳೀನರಸೀಪುರ	ಹಳೀಕೋಟೆ	ಕಾಯಂಗುತ್ತಿ ಪಟ್ಟಣಕಟ್ಟೆ	1. ನರಸಪಂಡಿತ, 2. ಕೃಷ್ಣಪಂಡಿತ, 3. ನರಸಿಂಹಪಂಡಿತ.	565 9	356	273 1	997 3 5	1907ನೆ ಇಸವಿ ಅಗಸ್ಟು 6ನೆ ತಾರೀಖು ಹೊಳೀನರಸೀಪುರದ ತಾಲ್ಲೂಕು ಹೇರಿಯಲ್ಲಿ ಜನರಲ್ ಅಸಿಸ್ಟೆಂಟ್ ಕಮಿಷನರವರು ಅಥವಾ ಡೆಪ್ಯೂಟಿ ಕಮಿಷನರವರಿಂದ ದಾಖಲಾಗುವ ಇತರ ಅಧಿಕಾರಿಗಳು ಹರಾಜು ನಡೆಸುವರು.

ಎ. ಕೃಷ್ಣಸ್ವಾಮಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು ನೆ ಜುಲೈ 1907.

ಸ॥ 1907ನೆ ಇಸವಿ ಜುಲೈ ತಾರೀಖು 6ನೆ ಮುಕರ್ರಂನ ಬಾಬತು ಅಬ್‌ಸ್ಟ್ರಾಕ್ಟು ನೋಟಿಫಿಕೇಷನ್.

ಈ ಮೂರ್ಜಿನ್ನಲ್ಲಿ ನಮೂದು ಮಾಡಿರುವ ಇನಾಂ ಗ್ರಾಮಗಳು ಕಂದಾಯ ಬಾಕೀಗೋಸ್ಕರ ಅದರ ಬಾಜುದಲ್ಲಿ ನೋಟು ಮಾಡಿರುವ ತಾರೀಖುಗಳಲ್ಲಿ ಶಿವಮೊಗ್ಗ ತಾಲ್ಲೂಕು ಕಛೇರಿ ಖಿಲ್ಲೆ ಹರಾಜು ಮಾಡಲ್ಪಡುತ್ತವೆ.

1. ಊರೆಗಡೂರು	... 15—8—07.	6. ಆನೆಹಳ್ಳಿ	... 16—8—07.
2. ತಾರೇಕಟ್ಟೆ	... ಡಿಟೋ	7. ತಟ್ಟಿಕೆರೆ	... 17—8—07.
3. ಕುಸ್ಕೂರು	... ಡಿಟೋ	8. ಗಾಜನೂರು	... ಡಿಟೋ
4. ಮತ್ತೂರು	... 16—8—07.	9. ಕುಡಗಲಮನೆ	... ಡಿಟೋ
5. ಹೊಸಹಳ್ಳಿ	... ಡಿಟೋ	10. ಭಂಡಾರಹಳ್ಳಿ	... 19—8—07.

ಈ ತಪಸೀಲು ತಿಳಿಯುವ ಬಗ್ಗೆ 1907ನೆ ಇಸವಿ ಜುಲೈ ತಾರೀಖು 18ನೆ ಮುಕರ್ರಂನ ಮೈಸೂರು ಗೆಜೆಟ್ಟು IIನೆ ಭಾಗದ ನಂ. 336, 337, 338, 339, 340, 341, 342, 343, 344, 345ನೆ ಪೇಜುಗಳಲ್ಲಿ ನೋಡಬೇಕು.

ಎ. ವೇದಾಂತದೇಸಿಕಂ ಐಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.